ವಿವರಿಸಿದ್ದ. ಅದಾಗ್ಯೂ ಇನ್ನಿತರ ಸಾವಿರಾರು ಘಟನೆಗಳನ್ನು ಆತನ ಎದುರು ಪ್ರಸ್ತಾಪಿಸಿರಲಿಲ್ಲ. ಯಾವಾಗಲೂ ದುರದೃಷ್ಟ ಆತನ ಬೆಂಬತ್ತಿಯೇ ಇತ್ತು. ಒಂದು ಕಡೆ ಟೆಂಟ್ ಹೊಡೆದು, ಒಲೆ ಹೂಡಿ ಶಾಶ್ವತವಾಗಿ ನೆಲೆ ಕಂಡುಕೊಳ್ಳುತ್ತಿರುವಂತೆ, ಎಲ್ಲಿಂದಲೋ ಬೀಸಿ ಬಂದ ಗಾಳಿ ಆತನ ಟೆಂಟಿನ ಕಂಬಗಳನ್ನು ಕಿತ್ತೆಸೆದು, ಒಲೆಯ ಬೆಂಕಿಯನ್ನೆಲ್ಲ ತೂರಾಡಿ, ಆತನನ್ನು ವಿನಾಶದತ್ತ ನೂಕುತ್ತಿತ್ತು. ಆ ದೀಪಗೃಹದ ಶಿಖರದ ಮೇಲಿದ್ದ ಬಾಲ್ಕನಿಯಿಂದ ಬೆಳಕನ್ನು ಪ್ರತಿಫಲಿಸುವ ಅಲೆಗಳನ್ನು ನೋಡುತ್ತಿರುವಂತೆ ಈ ಹಿಂದೆ ತಾನು ಹಾಯ್ದು ಬಂದ ಎಲ್ಲ ಘಟನೆಗಳನ್ನು ಸ್ಮರಿಸಿಕೊಂಡ. ಜಗತ್ತಿನ ನಾಲ್ಕೂ ದಿಕ್ಕಿನಲ್ಲಿ ದಂಡಯಾತ್ರೆ ಗೈದು ಎಲ್ಲ ಬಗೆಯ ಉದ್ಯೋಗಗಳಲ್ಲಿ ಆತ ತನ್ನ ಶಕ್ತಿಯನ್ನೆಲ್ಲ ವಿನಿಯೋಗಿಸಿದ್ದ.

ದುಡಿಮೆಯನ್ನು ಪ್ರೀತಿಸುವ ಪ್ರಾಮಾಣಿಕ ವ್ಯಕ್ತಿಯಾಗಿದ್ದ, ಆತ. ಒಂದಕ್ಕಿಂತ ಹೆಚ್ಚು ಸಲ ಸಾಕಷ್ಟು ಹಣ ಗಳಿಸಿದ್ದ ಹಾಗೂ ಎಲ್ಲ ರೀತಿಯ ಮುಂದಾಲೋಚನೆ ವಹಿಸಿದ್ದರೂ ಆತ ಗಳಿಸಿದ್ದನ್ನು ಉಳಿಸಿಕೊಳ್ಳಲಾಗಲಿಲ್ಲ. ಯಾವಾಗಲೂ ಹೀಗೇ ಆಗುತ್ತಿತ್ತು. ಆತ ಆಸ್ಟ್ರೇಲಿಯಾದಲ್ಲಿ ಚಿನ್ನದ ಗಣಿಗಾರನಾಗಿದ್ದ, ಆಫ್ರಿಕಾದಲ್ಲಿ ವಜ್ರದ ಗಣಿಗಾರನಾಗಿದ್ದ, ಈಸ್ಟ್ ಇಂಡೀಸ್‌ದಲ್ಲಿ ಸಾರ್ವಜನಿಕ ಸೇವೆಯಲ್ಲಿ ಓರ್ವ ಬಂದೂಕುಧಾರಿ ಸೇನಾನಿಯಾಗಿದ್ದ. ಕ್ಯಾಲಿಫೋರ್ನಿಯಾದಲ್ಲಿ ಆತ ಒಂದು ಜಾನುವಾರು ಕೇಂದ್ರ ಸ್ಥಾಪಿಸಿದ್ದ. ಆದರೆ, ಬರಗಾಲ ಆತನನ್ನು ಸರ್ವನಾಶಗೊಳಿಸಿತು. ಬ್ರೆಜಿಲ್‌ನ ಒಳನಾಡಿನಲ್ಲಿ ಕಾಡಿನ ಆದಿವಾಸಿಗಳ ಜೊತೆ ವಾಣಿಜ್ಯ ವ್ಯವಹಾರ ನಡೆಸಲು ಪ್ರಯತ್ನಿಸಿದ. ಆದರೆ ಆತನ ಸರಕು ಸಾಗಾಣೆಯ ದೋಣಿ ಅಪಘಾತಕ್ಕೀಡಾಗಿ ಅಮೇಜಾನ್ ನದಿಯಲ್ಲಿ ಮುಳುಗಿ ಹೋಯಿತು. ಎಷ್ಟೋ ವಾರಗಳವರೆಗೆ ತನ್ನಷ್ಟಕ್ಕೆ ತಾನೊಬ್ಬನೆ ಕಾಡಿನಲ್ಲಿ ನಿರಾಯುಧನಾಗಿ, ಅರೆಬೆತ್ತಲಾಗಿ, ಕಾಡಿನ ಹಣ್ಣುಗಳನ್ನು ತಿನ್ನುತ್ತ, ಪ್ರತಿಕ್ಷಣವು ಸಾವಿಗೆದುರಾಗಿ ಕಾಡುಪ್ರಾಣಿಗಳ ದವಡೆಗಳಿಂದ ತಪ್ಪಿಸಿಕೊಳ್ಳುತ್ತ ಅಲೆದಾಡಿದ. ಅರ್ಕಾನ್ಸಸ್‌ದ ಹೆಲೆನಾದಲ್ಲಿ ಒಂದು ಲೋಹ ಕರಗಿಸುವ ಕಾರ್ಖಾನೆ ಸ್ಥಾಪಿಸಿದ. ಆದರೆ ಇಡೀ ಪಟ್ಟಣವನ್ನೇ ಕಬಳಿಸಿದ ಮಹಾಬೆಂಕಿಯಲ್ಲಿ ಆತನ ಕಾರ್ಖಾನೆಯೂ ಬೆಂಕಿಗಾಹುತಿಯಾಯಿತು. ನಂತರ ಅವನು ಈಸ್ಟ್ ಇಂಡೀಸ್ ಪ್ರದೇಶದ ರೋಕೀ ಮೌಂಟನ್ಸ್‌ದಲ್ಲಿರುವ ಆದಿವಾಸಿ ಇಂಡಿಯನ್ನರ ಕೈಯಲ್ಲಿ ಸಿಕ್ಕಿ ಹಾಕಿಕೊಂಡ. ಪವಾಡ ಸದೃಶವೆಂಬಂತೆ ಕೆನೆಡಿಯನ್ ಬೇಟೆಗಾರರಿಂದ ಆತ ರಕ್ಷಿಸಲ್ಪಟ್ಟ. ಆಮೇಲೆ ಬೋಹಿಯಾ ಹಾಗೂ ಬೋರ್ಡೋ ನಡುವೆ ಸಂಚರಿಸುತ್ತಿದ್ದ ಹಡಗಿನಲ್ಲಿ ನಾವಿಕನಾಗಿ ಸೇವೆ ಸಲ್ಲಿಸಿದ. ಅಲ್ಲದೆ, ತಿಮಿಂಗಲ ಬೇಟೆಯ ಹಡಗಿನಲ್ಲಿ ಈಟಿಗಾರನಾಗಿ ದುಡಿದ. ಆದರೆ, ಅವೆರಡೂ ನೌಕಾಘಾತಕ್ಕೊಳಗಾದವು. ಹವಾನಾದಲ್ಲಿ ಅವನದೊಂದು ಸಿಗರೇಟ್ ಕಾರ್ಖಾನೆಯಿತ್ತು. ಅಲ್ಲಿ ಆತ ವೊಮಿಟೊ ರೋಗದಿಂದ ಬಳಲುತ್ತಿದ್ದಾಗ ತನ್ನ ಕಾರಖಾನೆಯ ಪಾಲುದಾರನಿಂದಲೇ ದೋಚಲ್ಪಟ್ಟ. ಕೊನೆಗೊಮ್ಮೆ ಆತ ಆ್ಯಸ್ಪಿನ್‌ವಾಲ್ ದ್ವೀಪಕ್ಕೆ ಬಂದ. ಅಲ್ಲಿಗೆ, ಆತನ ವಿಫಲಯಾತ್ರೆಗಳು ಕೊನೆಗೊಂಡವೆನ್ನಬೇಕು. ಏಕೆಂದರೆ, ಬರೀ ಬಂಡೆಗಲ್ಲುಗಳಿಂದ ತುಂಬಿಕೊಂಡ ಆ ಪುಟ್ಟ ದ್ವೀಪದಲ್ಲಿ ಕಳೆದುಕೊಳ್ಳುವಂಥಹುದೇನಿದೆ? ಅಲ್ಲಿ ನೀರಿಲ್ಲ, ಬೆಂಕಿ ಇಲ್ಲ, ಜನರೂ ಇಲ್ಲ. ಆದರೆ, ಸ್ಕಾವಿನ್‌ಸ್ಕಿ ಮನುಷ್ಯರಿಂದ ಅಷ್ಟೇನೂ ತೊಂದರೆ ಅನುಭವಿಸಿರಲಿಲ್ಲ. ಯಾವಾಗಲೂ ಆತನಿಗೆ ಕೆಟ್ಟವರಿಗಿಂತ ಒಳ್ಳೆಯ ಜನರ ಸಂಪರ್ಕವೇ ಒದಗಿತ್ತು. ಆದರೆ ಎಲ್ಲ ನಾಲ್ಕೂ ಭೂತ ವಸ್ತುಗಳು(ಭೂಮಿ, ನೀರು, ಗಾಳಿ, ಬೆಂಕಿ) ತನ್ನನ್ನು ಸತಾಯಿಸುತ್ತಿವೆ ಎಂದೆನಿಸಿತ್ತು ಆತನಿಗೆ. ಅವನ ಬಗ್ಗೆ ಗೊತ್ತಿದ್ದವರು ಅವನಿಗೆ ದೈವಬಲ ಇಲ್ಲವೇ